# ಮಡೊನ್ನಾ ಹಾಡು

ಕೊರೊನಾ ವೈರಸ್ ತಂದಿರುವ ಕೋವಿಡ್–19 ರೋಗಕ್ಕೆ ಜಗತ್ತೇ ಶಾಪ ಹಾಕುತ್ತಿದೆ. ಆದರೆ ಬ್ರಿಟನ್ನಿನ ವಿಶ್ವಖ್ಯಾತಿಯ ಗಾಯಕಿ ಮಡೊನ್ನಾ ಕೋವಿಡ್–19 ಅನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾಳೆ. ಆಕೆಯ ಪ್ರಕಾರ, 'ಅಸಮಾನತೆ ತುಂಬಿ ತುಳುಕುತ್ತಿದ್ದ ಜಗತ್ತಿನಲ್ಲಿ ಸಮಾನತೆಯನ್ನು ಸಾಧಿಸಿದ ಹೆಗ್ಗಳಿಕೆ ಕೋವಿಡ್‌ನದ್ದು.'

ಕೊರೊನ ವೈರಸ್ ಕುರಿತು ಆಕೆ ಮಾಡಿರುವ 'ಗುಡ್ ಮಾರ್ನಿಂಗ್ ಬ್ರಿಟನ್' ವಿಡಿಯೊದಲ್ಲಿ ವೈರಸ್ ಅನ್ನು ಹಾಡಿ ಹೊಗಳಿದ್ದಾಳೆ. ಅಚ್ಚಬಿಳಿಯ ಬಾತ್‌ಟಬ್‌ನಲ್ಲಿ ನೀರ ತುಂಬ ಗುಲಾಬಿ ಪಕಳೆಗಳನ್ನು ಹಾಕಿ, ನಗ್ನಳಾಗಿ ಕುಳಿತು ಈಕೆ ಹಾಡು ಓದಿದ್ದಾಳೆ. 'ಕೋವಿಡ್ 19, ನೀನು ಮಹಾಸಮಾನತಾವಾದಿ. ಯಾರನ್ನೇ ಆದರೂ ಅವನೆಷ್ಟು ಶ್ರೀಮಂತ, ಎಷ್ಟು ಪ್ರಖ್ಯಾತ, ಎಷ್ಟು ಸ್ಮಾರ್ಟ್ ಎನ್ನುವುದನ್ನು ಈ ವೈರಸ್ ನೋಡುವುದಿಲ್ಲ. ಹಲವು ವಿಧದಲ್ಲಿ ಈ ವೈರಸ್ ನಮ್ಮೆಲ್ಲರ ಮಧ್ಯೆ ಸಮಾನತೆಯನ್ನು ತಂದಿದೆ. ನಾವೆಲ್ಲರೂ ಒಂದೇ ನೌಕೆಯಲ್ಲಿದ್ದೇವೆ. ನೌಕೆ ಮುಳುಗಿದರೆ ಎಲ್ಲರೂ ಮುಳುಗುತ್ತೇವೆ' ಎಂದು ಈಕೆಯ ಭಾವಲಹರಿ ಹರಿದಿದೆ. ಇನ್‌ಸ್ಟಾಗ್ರಾಮ್‌ನಲ್ಲಿ ಕೋಲಾಹಲ ಎಬ್ಬಿಸಿರುವ, ಈಕೆಯ ಈ ಕವಿತೆಯ ವಿರುದ್ಧ ಕಟುಟೀಕೆಗಳು ಕೇಳಿಬಂದಂತೆಯೇ, ಸಮರ್ಥನೆಗಳೂ ಬಂದಿವೆ. 'ಗುಲಾಬಿ ಪಕಳೆಗಳ ಮಧ್ಯೆ ಕುಳಿತು ಜಗತ್ತಿಗೆ ಸಂದೇಶ ಕೊಡುವುದು ಸಾಕು' ಎಂದೊಬ್ಬರು ಹರಿಹಾಯ್ದಿದ್ದಾರೆ. ಬಾತ್‌ರೂಂ ಎನ್ನುವುದು ಈಕೆಗೊಂದು ಒಬ್ಸೆಷನ್ ಇದ್ದ ಹಾಗಿದೆ. ಈ ಹಿಂದೆ ಈಕೆಯ ವೋಗ್ ಹಾಡು ಕೂಡಾ ಬಾತ್‌ರೂಂನಲ್ಲಿ ಚಿತ್ರಿತವಾಗಿತ್ತು.

ಪಾಪ್ ಸಂಗೀತ ಕ್ಷೇತ್ರದಲ್ಲಿ ಮಡೊನ್ನಾ ಖಾತೆಯಲ್ಲಿ ಹಲವು ಸಾರ್ವಕಾಲಿಕ ದಾಖಲೆಗಳಿವೆ. ಈಕೆ ಗಾಯಕಿಯಾಗಿ ಗಳಿಸಿದ ಸಂಭಾವನೆಯೇ 1.2 ಶತಕೋಟಿ ಡಾಲರ್ ದಾಟಿದೆ. ಕಳೆದ 41 ವರ್ಷಗಳಿಂದ ಗಾಯಕಿಯಾಗಿ ಈಕೆಯ ಖ್ಯಾತಿ ಏಕಪ್ರಕಾರವಾಗಿ ಏರುತ್ತಲೇ ಇದೆ. ಗೀತರಚನೆಕಾರ್ತಿ, ನಟಿ, ಬ್ಯುಸಿನೆಸ್‌ವುಮನ್, ವಿಡಿಯೊ ನಿರ್ಮಾಪಕಿ, ನಿರ್ದೇಶಕಿ, ಲೇಖಕಿ, ದಾನಶೀಲೆ – ಹೀಗೆ ಈಕೆಗೆ ಹಲವು ಮುಖಗಳಿವೆ.

ಅಮೆರಿಕದ ಮಿಚಿಗನ್‌ನ ರಾಚೆಸ್ಟರ್ ಹಿಲ್ಸ್‌ನಿಂದ ಹೊರಟು ಈಕೆ ಏರಿರುವ ಖ್ಯಾತಿಯ ಎತ್ತರ ನಿಜಕ್ಕೂ ಅತ್ಯುನ್ನತ. ಕಳೆದ ವರ್ಷ ವಿಶ್ವದ ಐದನೇ ಶ್ರೀಮಂತ ಗಾಯಕಿ ಆಗಿದ್ದ ಮಡೊನ್ನಾ, ಈ ವರ್ಷ ವಿಶ್ವದ ಎರಡನೇ ಶ್ರೀಮಂತ ಗಾಯಕಿ ಎನ್ನಿಸಿಕೊಂಡಿದ್ದಾಳೆ. ಇವತ್ತು ಪಾಪ್ ಸಂಗೀತ ಕ್ಷೇತ್ರದಲ್ಲಿ ಅತ್ಯಧಿಕ ಜನಪ್ರಿಯತೆ ಗಳಿಸಿರುವ ಗಾಯಕಿಯರಾದ ಬ್ರಿಟ್ನಿ ಸ್ಪಿಯರ್ಸ್, ಶಕೀರಾ, ಲೇಡಿ ಗಾಗಾ ಎಲ್ಲರೂ ಮಡೊನ್ನಾಳ ಪ್ರಭಾವಕ್ಕೆ ಒಳಗಾದವರೇ.



ಮಡೊನ್ನಾಳ ಹೊಸ ಆಲ್ಬಂ 'ಮ್ಯಾಡಮ್ ಎಕ್ಸ್' ಜೂನ್‌ನಲ್ಲಿ ಬಿಡುಗಡೆಯಾಗಲಿದೆ. ಇದು ಆಕೆಯ 14ನೇ ಸ್ಟುಡಿಯೊ ಆಲ್ಬಂ. ಈ ಆಲ್ಬಂ ಪ್ರಚಾರಕ್ಕಾಗಿ ನಡೆಸುತ್ತಿರುವ 'ಮ್ಯಾಡಮ್ ಎಕ್ಸ್' ವಿಶ್ವಪರ್ಯಟನೆ ನ್ಯೂಯಾರ್ಕ್‌ನಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಮುಂದುವರಿಯಲಿದೆ. ಮಾರ್ಚ್ ಎರಡನೇ ವಾರದ ಆರಂಭದಲ್ಲಿ ಪ್ಯಾರಿಸ್‌ನಲ್ಲಿ ನಡೆಸಬೇಕಿದ್ದ ಕಾರ್ಯಕ್ರಮ ಕೊರೊನಾ ವೈರಸ್‌ನಿಂದಾಗಿ ರದ್ದಾಗಿದೆ. ವಿಶ್ವಪರ್ಯಟನೆಯ ಎಲ್ಲ ಕಾರ್ಯಕ್ರಮಗಳೂ ಒಳಾಂಗಣ ಕಾರ್ಯಕ್ರಮ ಎನ್ನುವುದನ್ನು ಸಂಘಟಕರು ಈಗಾಗಲೆ ಸ್ಪಷ್ಟಪಡಿಸಿದ್ದಾರೆ. ಆದರೆ ಈಗ ಅಮೆರಿಕದಲ್ಲಿ ಅದರಲ್ಲೂ ನ್ಯೂಯಾರ್ಕ್‌ನಲ್ಲಿ ಕೋವಿಡ್–19 ನಡೆಸಿರುವ ವ್ಯಾಪಕ ಸಾವುನೋವುಗಳನ್ನು ಗಮನಿಸಿದರೆ, ಹೊಸ ಆಲ್ಬಂ ಬಿಡುಗಡೆ ದಿನಾಂಕವನ್ನೂ ಮುಂದೂಡಲೂಬಹುದು.

69ರ ಈ ಇಳಿವಯಸ್ಸಿನಲ್ಲೂ ಮಡೊನ್ನಾ ಸಂಗೀತಸಂಜೆಗೆ ಸಾವಿರಾರು ಜನ ಸೇರುತ್ತಾರೆ ಎನ್ನುವುದು ವಿಶೇಷ. ಲೈವ್ ಮತ್ತು ವಿಡಿಯೊಗಳನ್ನು ಬುದ್ಧಿವಂತಿಕೆಯಿಂದ ಮಿಕ್ಸ್ ಮಾಡುವ ಈಕೆಯ ಸ್ಟೇಜ್ ಕಾರ್ಯಕ್ರಮಗಳು ಕ್ರಿಯೇಟಿವ್ ಆಗಿಯೂ ಹೆಸರು ಪಡೆದಿವೆ. ಸಿಂಗಲ್ ಆಲ್ಬಂಗಳಂತೂ ಹಲವಾರು ವರ್ಷಗಳಿಂದ 'ನಂಬರ್ ಒನ್' ಸ್ಥಾನದಲ್ಲಿ ಅಬಾಧಿತವಾಗಿವೆ. 'ಲೈಕ್ ಎ ವರ್ಜಿನ್', 'ಲಾ ಐಲಾ ಬೊನಿಟಾ', 'ಲೈಕ್ ಎ ಪ್ರೇಯರ್', 'ವೋಗ್', 'ಟೇಕ್ ಎ ಬೋ', 'ಫ್ರೋಝನ್', 'ಮ್ಯೂಸಿಕ್', 'ಹಂಗ್ ಅಪ್', 'ಫೋರ್ ಮಿನಿಟ್ಸ್' ಮುಂತಾದ ಆಕೆಯ ಸಿಂಗಲ್ಸ್‌ಗಳು ಈಗಲೂ ಹೆಸರುವಾಸಿ. ಈಕೆಯ 30 ಕೋಟಿಗೂ ಹೆಚ್ಚು ರೆಕಾರ್ಡ್ಸ್‌ಗಳು ಮಾರಾಟವಾಗಿರುವುದು ಸಾರ್ವಕಾಲಿಕ ವಿಶ್ವದಾಖಲೆ.

ನಟಿಯಾಗಿಯೂ ಮಡೊನ್ನಾ ಲಕ್ಷಾಂತರ ಪ್ರೇಕ್ಷಕರ ಹೃದಯ ಗೆದ್ದಿದ್ದಾಳೆ. 1985ರಲ್ಲಿ 'ಡೆಸ್ಪರೇಟ್ಲೀ ಸೀಕಿಂಗ್ ಸೂಸಾನ್'ನ ಪಾತ್ರದಿಂದ ಹಿಡಿದು 1996ರಲ್ಲಿ 'ಎವಿಟಾ'ದಲ್ಲಿ ನಿರ್ವಹಿಸಿದ ಪಾತ್ರದವರೆಗೆ ಈಕೆಯ ನಟನೆಯ ವ್ಯಾಪ್ತಿಯೂ ದೊಡ್ಡದು. 6 ಮಕ್ಕಳ ಈ ಮಹಾಮಾತೆ ಇಳಿವಯಸ್ಸಿನಲ್ಲೂ ಫ್ಯಾಷನೆಬಲ್ ಆಗಿ ಕಾಣಿಸಿಕೊಳ್ಳುತ್ತಿದ್ದಾಳೆ. ಆದರೆ ಕೊರೊನಾ ಶ್ಲಾಘನೆಯ ಹಾಡು ಮಾತ್ರ ದುಬಾರಿಯಾಗುವ ಹಾಗೆ ಕಾಣುತ್ತಿದೆ.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65